# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 40 ಫ್ರಾ.ಸಾ. : 23**

| | | |
|---|---|---|
| ಸಾಕ್ಷಿಯ ಹೆಸರು | : | ವಿವೇಕ ವಿ ಶೆಣ್ವಿ |
| ತಂದೆಯ ಹೆಸರು | : | ವಾಸುದೇವ ಶೆಣ್ವಿ |
| ವಯಸ್ಸು | : | 55 ವರ್ಷ |
| ಕೆಲಸ | : | KUWSMP, ಸಹಾಯಕ ಯೋಜನಾ ನಿರ್ದೇಶಕರು |
| ವಾಸ | : | ಹೊನ್ನಾವರ |

**ದಿನಾಂಕಃ 03-08-2025 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಅಗಸ್ಟ್ **2019** ರಿಂದ ಅಗಸ್ಟ್ 2021 ರವೆರಗೆ ನಾನು ಹೊನ್ನಾವರದಲ್ಲಿ ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 18.05.2021 ರಂದು ಹೊನ್ನಾವರ ಪೊಲೀಸ್ ವೃತ್ತ ನಿರೀಕ್ಷಕರ ಕಛೇರಿಯಿಂದ ಒಂದು ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ಈ ಪ್ರಕರಣದ ಘಟನಾ ಸ್ಥಳ ಹಾಗೂ ಆರೋಪಿಯು ಕೃತ್ಯಕ್ಕೆ ಬಳಸಿದ ಸ್ವತ್ತನ್ನು ಬಚ್ಚಿಟ್ಟ ಸ್ಥಳದ ಸರ್ವೆ ನಂಬರ ಮಾಹಿತಿ ಹಾಗೂ RTC ಯನ್ನು ಪೂರೈಸುವಂತೆ ಕೋರಿಕೊಂಡಿರುತ್ತಾರೆ. ಆನಂತರ ಪುನಃ ದಿನಾಂಕ 08.07.2021 ರಂದು ಅದೇ ವಿಷಯವಾಗಿ ಮತ್ತೊಂದು ಕೋರಿಕೆ ಪತ್ರ ಬಂದಿರುತ್ತದೆ. ನಂತರ ನಾನು ದಿನಾಂಕ 27.07.2021 ರಂದು ಭೂ ದಾಖಲೆಗಳ ಸಹಾಯ ನಿರ್ದೇಶಕರು ಹೊನ್ನಾವರವರಿಗೆ ಸ್ಥಳದ ಬಗ್ಗೆ ಮಾಹಿತಿ ನೀಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ನಂತರ ದಿನಾಂಕ 28.07.201 ರಂದು ಭೂ ದಾಖಲೆಗಳ ಸಹಾಯ ನಿರ್ದೇಶಕರು ಸ್ಥಳಕ್ಕೆ ಬೇಟಿ ನೀಡಿ ಮತ್ತು ಕಛೇರಿಯ ದಾಖಲೆಗಳನ್ನು ಪರಿಶೀಲಿಸಿ ಘಟನಾ ಸ್ಥಳವು ಚಂದಾವರ ಗ್ರಾಮದ ಸರ್ವೆ ನಂಬರ 96 ಎ/1 ಆಗಿರುತ್ತದೆ ಎಂದು ಹಾಗೂ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ತಾನು

ಕತ್ಯದ ವೇಳೆ ಧರಿಸಿದ್ದ ಲುಂಗಿಯನ್ನು ಬಚ್ಚಿಟ್ಟ ಸ್ಥಳವು ಹಳ್ಳವಾಗಿರುತ್ತದೆ ಎಂದು ಪಿಟಿ ಶೀಟಿನಲ್ಲಿ ನಮೂದಿಸಿ RTC ಯೊಂದಿಗೆ ನಮ್ಮ ಕಛೇರಿಗೆ ವರದಿ ನೀಡಿರುತ್ತಾರೆ. ಆನಂತರ ಸದರಿ ವರದಿಗಳ ಆದಾರದ ಮೇಲೆ ನಾನು ಪೊಲೀಸ್ ವೃತ್ತ ನಿರೀಕ್ಷಕರು ಹೊನ್ನಾವರರವರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಪೊಲೀಸರು ಕೋರಿಕೆ ಪತ್ರ ಸಲ್ಲಿಸಿದಾಗ ಕಛೇರಿಯ ಸಿಬ್ಬಂದಿಗಳಿಗೆ ಕರೋನಾ ಪಾಸಿಟೀವ್ ವೈರಸ್ ಬಂದಿದ್ದು, ಹಾಗೂ ಅನ್ಯ ಕರ್ತವ್ಯಕ್ಕೆ ನೇಮಿಸಿದ್ದರಿಂದ, ನಿಗದಿತ ವೇಳೆಯಲ್ಲಿ ಮಾಹಿತಿ ಪೂರೈಸಲು ಸಾಧ್ಯವಾಗಲಿಲ್ಲ. ಪೊಲೀಸರಿಂದ ಬಂದ ಕೋರಿಕೆ ಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-92 ಮತ್ತು 93 ಎಂದು ಗುರುತಿಸಲಾಯಿತು. ಭೂ ದಾಖಲೆ ಸಹಾಯಕ ನಿರ್ದೇಶಕರಿಂದ ಪಡೆದುಕೊಂಡ ನಕಾಶೆ, RTC ಮತ್ತು ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ನಕಾಶೆಯನ್ನು ನಿ.ಪಿ 94 ಎಂದು, RTC ಯನ್ನು ನಿ.ಪಿ-95 ಎಂದು ಕವಚ ಪತ್ರವನ್ನು ನಿ.ಪಿ. 96 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.-96(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಮ್ಮ ಕಛೇರಿಯಿಂದ ನೀಡಿದ ಕವಚ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.97 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-97(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದಃ-**

2. ನಾನು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿಲ್ಲ. ನಾನು ಭೂ ದಾಖಲೆ ಸಹಾಯಕ ನಿರ್ದೇಶಕರಿಗೆ ಬರೆದ ಪತ್ರವನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಿ.ಪಿ-94 ನಕಾಶೆಯನ್ನು ಯಾರು ತಯಾರಿಸಿದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ನಕಾಶೆಯಲ್ಲಿ ಎಲ್ಲಿಯೂ ದಿಕ್ಕು ನಮೂದಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚೆಕ್ಬಂದಿ ನಮೂದಿಸಿಲ್ಲ ಎಂದರ ಸರಿ. ಹಳ್ಳ ಸಹ ಯಾವ ಕಡೆಗೆ ಇರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ನಕಾಶೆಯಲ್ಲಿ ನಮೂಸಿದ್ದು ಅದು ಈಗ ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗದೆ ಇದ್ದರೂ ಸಹ ಹಾಗೂ ಯಾವುದೇ ದಾಖಲೆಯನ್ನು ಪರಿಶೀಲಿಸದೇ ಇದ್ದರು ಸಹ ನಿ.ಪಿ-94 ರಿಂದ 97 ರವರೆಗೆ ದಾಖಲೆಗಳನ್ನು ಸೃಷ್ಟಿಸಿ, ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಕಾಶೆಯಲ್ಲಿ ತೋರಿಸಿದ ಸರ್ವೆ ನಂಬರಗಳಿಗೂ ಹಾಗೂ RTC ಯಲ್ಲಿರುವ ಸರ್ವೆ ನಂಬರಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ- ಇಲ್ಲ</u>**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಪರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ